# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1362

ಸದಸ್ಯರ ಹೆಸರು : ಶ್ರೀ ಚಿದಾನಂದ್ .ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 19.03.2025

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅತಿ ಹೆಚ್ಚು ಕುರಿ ಮತ್ತು ಮೇಕೆಗಳನ್ನು ಹೊಂದಿರುವ ತಾಲ್ಲೂಕು ಯಾವುದು; ಇಲ್ಲಿ ಇರುವ ಕುರಿ ಮತ್ತು ಮೇಕೆಗಳ ಸಂಖ್ಯೆ ಎಷ್ಟು; | ಕರ್ನಾಟಕ ರಾಜ್ಯದಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಅತೀ ಹೆಚ್ಚು ಕುರಿಗಳನ್ನು(478500) ಹೊಂದಿರುತ್ತದೆ.<br><br>ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕು ಅತೀ ಹೆಚ್ಚು ಮೇಕೆಗಳನ್ನು(161129) ಹೊಂದಿರುತ್ತದೆ. |
| ಆ) | ಪಶುಪಾಲನಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಗೆ ಪೂರಕ ವಾತಾವರಣ ನಿರ್ಮಾಣಕ್ಕಾಗಿ ಶಿರಾ ತಾಲ್ಲೂಕಿನ ರೈತರಿಗೆ ನೀಡುತ್ತಿರುವ ಸೌಲಭ್ಯಗಳಾವುವು; | ಪಶುಪಾಲನಾ ಇಲಾಖೆಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಗೆ ಪೂರಕ ವಾತಾವರಣ ನಿರ್ಮಾಣಕ್ಕಾಗಿ ಶಿರಾ ತಾಲ್ಲೂಕಿನ ರೈತರಿಗೆ ನೀಡುತ್ತಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.<br><br>1. ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಸದಸ್ಯರುಗಳಿಗೆ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿಯಲ್ಲಿ ಶೇ.50ರಷ್ಟು (ರೂ.87,500/-) NCDC ಸಾಲ ಮತ್ತು ಶೇ.25ರಷ್ಟು (ರೂ.43,750/-) ರಾಜ್ಯ ಸರ್ಕಾರ ಸಹಾಯಧನದೊಂದಿಗೆ 20+1 ಕುರಿ/ ಮೇಕೆ ಘಟಕಗಳನ್ನು ನೀಡಲಾಗುತ್ತಿದೆ.<br><br>ಸದರಿ ಯೋಜನೆಯಡಿ **ಶಿರಾ ತಾಲ್ಲೂಕಿನಲ್ಲಿ 132** ಫಲಾನುಭವಿಗಳಿಗೆ ಕುರಿ ಘಟಕಗಳನ್ನು ನೀಡಲಾಗಿದೆ.<br><br>2. ನಿಗಮದ ಅನುದಾನದಲ್ಲಿ ಗಿರಿಜನ ಉಪಯೋಜನೆಯಲ್ಲಿ (TSP) ಕುರಿ/ ಮೇಕೆ ಘಟಕ (6+1) ಶೇ90%ರಷ್ಟು ಸಹಾಯಧನದಲ್ಲಿ ಶಿರಾ ತಾಲ್ಲೂಕಿನಲ್ಲಿ **02** ಘಟಕಗಳನ್ನು ನೀಡಲಾಗಿದೆ. |

| | | |
|---|---|---|
| | | 3. ಕುರಿ/ಮೇಕೆಗಳಿಗೆ ಸಾಂಕ್ರಾಮಿಕ ರೋಗಗಳ ವಿರುದ್ಧ ಕಾಲ ಕಾಲಕ್ಕೆ ಲಸಿಕೆ ಹಾಕಲಾಗಿರುತ್ತದೆ ಹಾಗೂ ಜಂತುನಾಶಕ ಔಷಧಿಯನ್ನು ನೀಡಿ ರೋಗವನ್ನು ನಿಯಂತ್ರಣದಲ್ಲಿಡಲಾಗಿದೆ.<br>4. ತುಮಕೂರಿನ ಪಶುಪಾಲನಾ ಮತ್ತು ಪಶುವೈದ್ಯ ತರಬೇತಿ ಕೇಂದ್ರದಲ್ಲಿ **898** ಆಸಕ್ತ ರೈತರಿಗೆ ಕುರಿ/ಮೇಕೆ ಸಾಕಾಣಿಕೆ ಕುರಿತಾಗಿ ತರಬೇತಿಯನ್ನು ನಿಯಮಿತವಾಗಿ ನೀಡಲಾಗಿದೆ.<br>5. ಶಿರಾ ತಾಲ್ಲೂಕಿನಲ್ಲಿ ವಲಸೆ ಕುರಿಗಾರರಿಗೆ ಮಳೆ, ಬಿಸಿಲು ಮತ್ತು ಗಾಳಿಯಿಂದ ರಕ್ಷಣೆ ನೀಡಲು ಟೆಂಟ್ ಮತ್ತು ಇತರೆ ಪರಿಕರಗಳನ್ನು **14** ಕುರಿಗಾಹಿಗಳಿಗೆ ವಿತರಿಸಲಾಗಿದೆ.<br>6. ಶಿರಾ ತಾಲ್ಲೂಕಿನಲ್ಲಿ ಸತ್ತ ಕುರಿ/ಮೇಕೆಗಳಿಗೆ ಅನುಗ್ರಹ ಕೊಡುಗೆ ಯೋಜನೆಯಡಿಯಲ್ಲಿ **1346** ರೈತರಿಗೆ ಪರಿಹಾರ ಧನ ವಿತರಿಸಲಾಗಿದೆ. |
| ಇ) | ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿಗೆ ನಿಗಮದ ವತಿಯಿಂದ ಶಿರಾ ತಾಲ್ಲೂಕಿನಲ್ಲಿ ಆಧುನಿಕ ಸಂಸ್ಕರಣಾ ಕೇಂದ್ರವನ್ನು (ವಧಾಗಾರ) ಮಂಜೂರು ಮಾಡಲಾಗಿದೆಯೇ; ಮಾಡಲಾಗಿದ್ದರೆ ಯಾವ ವರ್ಷ ಮಂಜೂರು ಮಾಡಲಾಗಿದೆ ಮತ್ತು ಇದರ ಸಾಮರ್ಥ್ಯವೆಷ್ಟು; ರಾಜ್ಯದ ಇತರ ಯಾವ ಜಿಲ್ಲೆಯಲ್ಲಿ ವಧಾಗಾರಗಳು ನಿರ್ಮಾಣವಾಗಿವೆ; | ಶಿರಾ ತಾಲ್ಲೂಕಿನಲ್ಲಿ ಆಧುನಿಕ ಸಂಸ್ಕರಣಾ ಕೇಂದ್ರವನ್ನು (ವಧಾಗಾರ) ಮಂಜೂರು ಮಾಡಲಾಗಿದೆ. .<br>ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 26 ಕಕುಮ 2013, ದಿನಾಂಕ:30.03.2017ರ ಆದೇಶದನ್ವಯ 2017 ರಲ್ಲಿ ಮಂಜೂರು ಮಾಡಲಾಗಿದೆ.<br>ಪ್ರತಿದಿನ-1500 ಕುರಿ/ಮೇಕೆಗಳನ್ನು ವಧೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ.<br>ರಾಜ್ಯದ ಬೇರ ಯಾವುದೇ ಜಿಲ್ಲೆಯಲ್ಲಿ ವಧಾಗಾರಗಳು ನಿರ್ಮಾಣವಾಗಿರುವುದಿಲ್ಲ. |
| ಈ) | ವಧಾಗಾರ ನಿರ್ಮಾಣಕ್ಕಾಗಿ ಎಷ್ಟು ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ/ಮಂಜೂರು ಮಾಡಲಾಗಿದೆ? | ವಧಾಗಾರ ನಿರ್ಮಾಣಕ್ಕಾಗಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಚೀಲನಹಳ್ಳಿ ಗ್ರಾಮದ ಸರ್ವೆ ನಂ. 14 ರಲ್ಲಿ 20 ಎಕರೆ ಭೂಮಿಯನ್ನು ಜಿಲ್ಲಾಧಿಕಾರಿ, ತುಮಕೂರು ರವರಿಂದ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ ಮಂಜೂರು ಮಾಡಲಾಗಿದೆ. |
| ಉ) | ಸದರಿ ವಧಾಗಾರರಿಂದ ಎಷ್ಟು ಜನತೆಗೆ ಉದ್ಯೋಗ ದೊರೆಯಲಿದೆ ಹಾಗೂ ವಾರ್ಷಿಕವಾಗಿ ಎಷ್ಟು ವಹಿವಾಟಿನ ನಿರೀಕ್ಷೆಯಿದೆ ; | ಸದರಿ ವಧಾಗಾರದಿಂದ ಸರಿ ಸುಮಾರು 150 ರಿಂದ 200 ಯುವಕ/ಯುವತಿಯರಿಗೆ ಉದ್ಯೋಗ ದೊರೆಯಲಿದೆ. ವಾರ್ಷಿಕವಾಗಿ ಸರಿಸುಮಾರು ರೂ.125.00 ಕೋಟಿಗಳಷ್ಟು ವಹಿವಾಟು ನಿರೀಕ್ಷೆ ಇದೆ. |

| | | |
|---|---|---|
| ಊ) | ವಧಾಗಾರ ನಿರ್ಮಾಣದ ಅಂದಾಜು ವೆಚ್ಚವೆಷ್ಟು; ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಬಾಕಿಯಿರುವ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ನಿರ್ಮಾಣ ಪ್ರಸ್ತುತ ಯಾವ ಹಂತದಲ್ಲಿದೆ; ಕಾಮಗಾರಿಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ; | ಆಧುನಿಕ ವಧಾಗಾರ ನಿರ್ಮಾಣಕ್ಕಾಗಿ ಒಟ್ಟು ಅಂದಾಜು ಮೊತ್ತ **ರೂ.44.63** ಕೋಟಿಯಲ್ಲಿ ರೂ.**26.56** ಕೋಟಿಗಳನ್ನು ಸಿವಿಲ್ ಕಾಮಗಾರಿಗಳಿಗಾಗಿ ಸರ್ಕಾರಿ ಸಂಸ್ಥೆಯಾದ KHBಗೆ ಬಿಡುಗಡೆ ಮಾಡಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. M/s Pratha Meat works Pvt. Ltd., ಸಂಸ್ಥೆಯವರಿಂದ PPP ಮಾದರಿಯಲ್ಲಿ ರೂ.16.00 ಕೋಟಿಗಳ ವೆಚ್ಚದಲ್ಲಿ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳುವ ಮೂಲಕ ಘಟಕದ ನಿರ್ಮಾಣವನ್ನು ಪೂರ್ಣಗೊಳಿಸಲಾಗಿದೆ. |
| ಋ) | ವಧಾಗಾರ ನಿರ್ಮಾಣದಿಂದ ಸ್ಥಳೀಯ ಕುರಿ, ಮೇಕೆ ಸಾಕಾಣಿಕಾದಾರರಿಗೆ ಆಗುವ ಅನುಕೂಲಗಳೇನು? | 1. ಸ್ಥಳೀಯ ಕುರಿ/ಮೇಕೆಗಳ ಮಾಂಸವನ್ನು ರಫ್ತು ಮಾಡುವುದರಿಂದ ವಿದೇಶಗಳಿಂದ ಹೆಚ್ಚಿನ ಬೇಡಿಕೆ ಬರುವ ನಿರೀಕ್ಷೆ ಇರುವುದರಿಂದ ಸ್ಥಳೀಯ ಕುರಿ/ಮೇಕೆಗಳ ಬೆಲೆ ಹೆಚ್ಚಾಗುವ ನಿರೀಕ್ಷೆ ಇದ್ದು, ಸ್ಥಳೀಯ ಕುರಿಗಾರರಿಗೆ ಆರ್ಥಿಕವಾಗಿ ಹೆಚ್ಚು ಲಾಭವಾಗಲಿದೆ.<br>2. ಕುರಿ/ಮೇಕೆಗಳಿಗೆ ಮಾರುಕಟ್ಟೆಯ ಸೌಲಭ್ಯವನ್ನು 24/7 ಸಮಯದಲ್ಲಿ ಕಲ್ಪಿಸಲಾಗುತ್ತಿದೆ.<br>3. ಕುರಿ/ಮೇಕೆ ಸಾಕಾಣಿಕೆದಾರರಿಗೆ ಸಾಗಾಣಿಕೆ ವೆಚ್ಚ ಕಡಿಮೆಯಾಗಲಿದೆ.<br>ಚರ್ಮ ಸಂಸ್ಕರಣಾ ಘಟಕ ಸ್ಥಾಪನೆಗೊಂಡು ಚರ್ಮೋದ್ಯಮ ಮತ್ತು ಇತರೆ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆತು ಸ್ಥಳೀಯರಿಗೆ ಉದ್ಯೋಗಾವಕಾಶ ಲಭ್ಯವಾಗುವುದು. |

**ಸಂಖ್ಯೆ:ಪಸಂಮೀ 92 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು